ಅಧ್ಯಕ್ಷರು:– ಇದರ ಬಗ್ಗೆ ಎರಡು ಉಪಪ್ರಶ್ನೆಗಳನ್ನು ಅವರು ಕೇಳಿದ್ದಾರೆ.

ಶ್ರೀ ಎನ್. ತಮ್ಮಣ್ಣ:– ನಾನೂ ಕೇಳಿದ್ದೇನೆ.

ಅಧ್ಯಕ್ಷರು:– ಇದು ನಿಮ್ಮ ಪ್ರಶ್ನೆ ಅಲ್ಲ. ಇದರಲ್ಲಿ ಆತ್ಮನಂದರವರ ಹೆಸರು ಇದೆ. ಆದರೂ, ಪರವಾಗಿಲ್ಲ ಕೇಳಿ.

ಶ್ರೀ ಎನ್. ತಮ್ಮಣ್ಣ:– ಉಲುವಾಲ ಗ್ರಾಮದ ಹತ್ತಿರ ಒಂದು ಮಿನಿ ಜಲವಿದ್ಯುತ್ ಯೋಜನೆಯನ್ನು ಮಾಡಬೇಕೆಂದು ಸುಮಾರು ಒಂದು ವರ್ಷದಿಂದ ತೀರ್ಮಾನ ಮಾಡಿದ್ದಾರೆ. ಅಲ್ಲಿ ಸುಮಾರು 3 ಎಕರೆ ಜಮೀನನ್ನು ಗುರ್ತಿಸಿ ನಾನು ಮತ್ತು ತಹಶೀಲ್ದಾರರು ರೈತರ ಜೊತೆಯಲ್ಲಿ ನೆಗೋಸಿಯೇಷನ್ ಮಾಡಿ ಒಂದು ವರ್ಷವಾಗಿದೆ. ಒಂದು ಎಕರೆಗೆ ಒಂದು ಲಕ್ಷ ರೂಪಾಯಿ ಅಂತ ನಿಗದಿ ಮಾಡಿದ್ದೇನೆ. ಆದರೆ ಇಲ್ಲಿಯವರೆಗೂ ಪವರ್ ಕಾರ್ಪೊರೇಷನ್‌ನವರಾಗಲಿ ಯಾರೂ ಮುಂದೆ ಬಂದಿಲ್ಲ. ಅಲ್ಲಿ ಏನಾಗಿದೆ ಎಂದರೆ ರೈತರು ಏನು ತಮ್ಮ ಜಮೀನನ್ನು ಕಳೆದುಕೊಳ್ಳುತ್ತಾರಲ್ಲಾ, ಆ ಜಮೀನಿಗೆ ಬೇರೆ ಜಮೀನನ್ನು ತೆಗೆದುಕೊಳ್ಳಬೇಕಾದರೆ ವರ್ಷವರ್ಷಕ್ಕೆ ಜಮೀನಿನ ಬೆಲೆ ಜಾಸ್ತಿಯಾಗುತ್ತದೆ. ಆದ್ದರಿಂದ ಈ ಜಮೀನನ್ನು ಯಾವಾಗ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುತ್ತಾರೆ ಎಂದು ತಮ್ಮ ಮೂಲಕ ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:– ಇವರು ಸ್ಥಳವನ್ನು ಗುರ್ತಿಸಿದ್ದೇವೆಂದು ಮಾನ್ಯ ಸದಸ್ಯರು ನನಗೆ ತಿಳಿಸುತ್ತಿದ್ದಾರೆ. ನಾನು ಅವರಿಗೆ ಮರುಸೂಚನೆಯನ್ನು ಕೊಡುಬಹುದಾದರೆ ಇಂತಹ ಸಣ್ಣ ಘಟಕಗಳನ್ನು ಕೋ–ಆಪರೇಟಿವ್ ಎಫರ್ಟ್ ಸ್ಥಳೀಕರು ತಾವೇ ಮುಂದಾಳುತನವನ್ನು ವಹಿಸಿ ಒಂದು ಕೋ–ಆಪರೇಟಿವ್ ಎಫರ್ಟ್ ಮಾಡಿ ಇಂತಹ ಸಣ್ಣ ಸಣ್ಣ ಜಲ ವಿದ್ಯುತ್ ಉತ್ಪಾದನೆಯನ್ನು ನೀವೇ ಮಾಡಿದರೆ ನಿಮ್ಮ ಕೋ–ಆಪರೇಟಿವ್ ಸೊಸೈಟಿಗೂ ಲಾಭ ಬರುತ್ತವೆ. ಜನಕ್ಕೂ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಅದನ್ನು ಪರಿಶೀಲಿಸಿ ಅಂತ ಹೇಳಿ ಮಾನ್ಯ ಸದಸ್ಯರಿಗೆ ಸೂಚನೆಯನ್ನು ಕೊಡುತ್ತೇನೆ.

ಮುಂಡರಗಿ ತಾಲ್ಲೂಕಿನಲ್ಲಿ ಕೆರೆಗಳ ದುರಸ್ತಿ

2191: ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮುಂಡರಗಿ ತಾಲ್ಲೂಕಿನಲ್ಲಿ ನೀರಾವರಿ ಕೆರೆಗಳಾದ ಡಂಬಳ, ಅಲೂರ ಮತ್ತು ಜಂಟ್ಲಿ ಶಿಲೋರ್ ಕೆರೆಗಳ ಕಾಲುವೆಗಳ ದುರಸ್ತಿಯಾಗಿಲ್ಲದ್ದರ ಕಾರಣಗಳು ಏನು ? ಮೇಲ್ಕಾಣಿಸಿದ ಕಾಲುವೆಗಳ ದುರಸ್ತಿ ಎಂದಿನಿಂದ ಪ್ರಾರಂಭ ಮಾಡುತ್ತೀರಿ;

ಆ. ಮುಂಡರಗಿ ತಾಲ್ಲೋಕಿನಲ್ಲಿ ಕಕ್ಕೂರ ಹಾಗೂ ಮುರಡಿ ಹೊಸಕೆರೆಗಳನ್ನು ನಿರ್ಮಾಣ ಮಾಡಲಿಕ್ಕೆ ಮನವಿಕೊಟ್ಟಿದ್ದರೂ ಇಲ್ಲಿಯವರೆಗೂ ಸರ್ವೆ ಕಾರ್ಯ ನಡೆದಿಲ್ಲದಿರುವುದಕ್ಕೆ ಕಾರಣಗಳೇನು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ. ಸದರಿ ಕೆರೆಗಳ ಕಾಲುವೆ ದುರಸ್ತಿ ಕಾರ್ಯವನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಆ. ಮುಂಡರಗಿ ತಾಲ್ಲೂಕು ಮುರಡಿ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ನಿರ್ಮಿಸಲು ಪೂರ್ವಭಾವಿ ತನಿಖಾ ವರದಿಯನ್ನು ತಯಾರಿಸಲಾಗಿದೆ. ಮತ್ತು 1993-94ನೇ ಸಾಲಿನ

ಆಯವ್ಯಯದಲ್ಲಿ 24 ಲಕ್ಷರೂ. ಗಳ ಅನುದಾನವನ್ನು ಒದಗಿಸಲಾಗಿದೆ. ಕಕ್ಕೂರ ಗ್ರಾಮದ ಬಳಿ ಹೊಸಕೆರೆ ನಿರ್ಮಾಣದ ಮನವಿ ಬಂದಿರುವುದಿಲ್ಲ.

ಶ್ರೀ ಕೆ.ಹೆಚ್. ಕುರುಡಗಿ:– ಮಾನ್ಯ ಅಧ್ಯಕ್ಷರೇ, ಈ ಎಲ್ಲಾ ತಾಲ್ಲೂಕ್‌ಗಳನ್ನು ತೆಗೆದುಕೊಳ್ಳುತ್ತೀರೆಂದು ಹೇಳಿದ್ದೀರಿ. ಎರಡನೆಯ-ಪ್ರಶ್ನೆಯಲ್ಲಿ ತಾವು ಕಕ್ಕೂರ್ ಗ್ರಾಮದಲ್ಲಿ ಹೊಸ ಕೆರೆಯನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದೀರಿ. ನಾನು ಹೊಸ ಕೆರೆಯ ಬಗ್ಗೆ ಕೇಳಿಯೇ ಇಲ್ಲ, ಅಲ್ಲಿ ಹೊಸ ಕೆರೆಯು ಆಗುವುದೇ ಇಲ್ಲ. ಅದು ಡಿ.ಪಿ.ಎ.ಪಿ ಯೊಳಗೆ ಲಿಫ್ಟ್ ಇರಿಗೇಷನ್ ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ, ಏನು ಮಾಡುತ್ತಿದ್ದೀರಿ ? ಈಗಾಗಲೇ ಅದರ ಬಗ್ಗೆ ಸ್ಟೈಕ್ ನಡೆಯುತ್ತಿದೆ. ಅದರ ಬಗ್ಗೆ ತಮ್ಮ ಅಭಿಪ್ರಾಯ ಏನು ?

ಡಾ. ಆರ್.ಬಿ. ಚೌಧರಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೊಸಕೆರೆ ನಿರ್ಮಾಣದ ಬಗ್ಗೆ ಮಾತ್ರ ಕೇಳಿದ್ದಾರೆ. ಲಿಫ್ಟ್ ಇರಿಗೇಷನ್ ಬಗ್ಗೆ ಅವರು ಕೇಳಿಲ್ಲ. ಹೊಸಕೆರೆಯನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಈಗಾಗಲೇ ನಾವು ಉತ್ತರ ಕೊಟ್ಟಿದ್ದೇವೆ. ಲಿಫ್ಟ್ ಇರಿಗೇಷನ್ ಸಲುವಾಗಿ ಡಿ.ಪಿ.ಎ.ಪಿ ಯಡಿಯಲ್ಲಿ ತೆಗೆದುಕೊಂಡ ಕಾಮಗಾರಿ ಇದು. ಆದ್ದರಿಂದ ಒಂದನೇಯ ಹಂತ ಮುಗಿಯಲಿಕ್ಕೆ ಬಂದಿತ್ತು. ಎರಡನೇ ಹಂತ ಇನ್ನೂ ಅನುದಾನಕ್ಕೆ ಒಳಪಟ್ಟಿಲ್ಲ. ಅನುದಾನಕ್ಕೆ ಒಳಪಟ್ಟ ಮೇಲೆ ನಾವು ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ.ಹೆಚ್. ಕುರುಡಗಿ:– ಈಗಾಗಲೇ 10 ವರ್ಷವಾಗಿದೆ. ಇದು ಡಿ.ಪಿ.ಎ.ಪಿ ಯೋಜನೆಯಲ್ಲಿ ಬಂದು ಹಾಗೆಯೇ ಉಳಿದಿದೆ. ಎಷ್ಟು ದಿವಸದಲ್ಲಿ ತೆಗೆದುಕೊಳ್ಳುತ್ತೀರಿ, ಈಗಾಗಲೇ ಅಲ್ಲಿ ರೈತರು ಸ್ಟೈಕ್ ಮಾಡುತ್ತಿದ್ದಾರೆ.

ಡಾ. ಆರ್.ಬಿ. ಚೌಧರಿ:– ಎರಡನೇ ಸ್ಟೇಜ್ ಅನ್ನು ಅನುದಾನಕ್ಕೆ ಒಳಪಡಿಸಬೇಕಾಗಿದೆ. ಅನುದಾನಕ್ಕೆ ಒಳಪಡಿಸಿದಮೇಲೆ ಮಾಡಬಹುದು.

ಶ್ರೀ ಕೆ.ಹೆಚ್. ಕುರುಡಗಿ:– ಟೈಮ್ ಲಿಮಿಟ್ ಬೇಕಲ್ಲ !

ಡಾ. ಆರ್.ಬಿ. ಚೌಧರಿ:– ಆದಷ್ಟು ಶೀಘ್ರ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶೃಂಗೇರಿ, ಕೊಪ್ಪ, ಎನ್ ಆರ್ ಪುರ ಪ್ರವಾಸಿ ಮಂದಿರಗಳ ದುರಸ್ತಿ

2198: ಶ್ರೀ ಯು.ಕೆ. ಶಾಮಣ್ಣ, (ಶೃಂಗೇರಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಶೃಂಗೇರಿ, ಕೊಪ್ಪಾ, ಎನ್ ಆರ್ ಪುರದಂತ ಪ್ರವಾಸಿ ಯಾತ್ರಾಸ್ಥಳಗಳಲ್ಲಿ ಪ್ರವಾಸಿ ಮಂದಿರಗಳ ಹಳೆಯ ಕಟ್ಟಡ ದುರಸ್ತಿ, ಹೆಚ್ಚುವರಿ ಕೊಠಡಿಗಳನ್ನು ಕಟ್ಟಲು ಸರ್ಕಾರ ಉದ್ದೇಶಿಸಿದೆಯೆ;

ಆ. ಹಾಗಿದ್ದಲ್ಲಿ, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು;

ಇ. ಹಾಗಿಲ್ಲದಿದ್ದಲ್ಲಿ, ಯಾವ ಮೊತ್ತದಿಂದ ಹಣ ಒದಗಿಸಲಾಗುವುದು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ. ದುರಸ್ತಿ ಮಾಡಲಾಗಿದೆ. ಹೆಚ್ಚುವರಿ ಕೊಠಡಿಗಳ ನಿರ್ಮಾಣದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿಲ್ಲ.

ಆ. ಮೇಲಿನ 'ಅ' ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.